ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

**ಕರ್ನಾಟಕ ವಿಧಾನ ಪರಿಷತ್ತು**

ನೂರ ನಲವತ್ತೆರಡನೆಯ ಅಧಿವೇಶನ

ಸೋಮವಾರ, ದಿನಾಂಕ: 14ನೇ ಡಿಸೆಂಬರ್, 2020

ಎನ್.ಜಿ.ಟಿ. ಆದೇಶದಿಂದ ಆಗಿರುವ ತೊಂದರೆ ಸರಿಪಡಿಸುವ ಕುರಿತು

ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನ ಸಭೆಯಿಂದ ಚುನಾಯಿತರಾದವರು):-

576(742) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಷ್ಟ್ರೀಯ ಹಸಿರು ನ್ಯಾಯಾಧೀಕರಣ ಪೀಠವು ಕೆರೆಯಂಗಳದ ಸುತ್ತಮುತ್ತ ಮತ್ತು ರಾಜಕಾಲುವೆಯ ಬಳಿ ಕಟ್ಟಡ, ಇನ್ನಿತರೆ ಕಾಮಗಾರಿ ನಿರ್ಮಾಣ ಮಾಡುವುದಕ್ಕೆ ನಿರ್ಬಂಧ ವಿಧಿಸಿ (ಬಫರ್‌ಝೋನ್) ಆದೇಶ ಹೊರಡಿಸಿರುವುದು ನಿಜವೇ;

(ಆ) ಹಾಗಿದ್ದಲ್ಲಿ, ಆದೇಶ ನೀಡಿದ್ದು ಯಾವಾಗ; ಆದೇಶದ ಪೂರ್ಣ ವಿವರ ನೀಡುವುದು;

(ಇ) ಆದೇಶವನ್ನು ಪಾಲನೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಈ ಕುರಿತು ಹೊರಡಿಸಿರುವ ಆದೇಶದ ಪ್ರತಿ ಒದಗಿಸುವುದು;

(ಈ) ಬಫರ್‌ಝೋನ್ ವ್ಯಾಪ್ತಿಯಲ್ಲಿ ಮನೆ, ನಿವೇಶನ ಖರೀದಿ ಮಾಡಿರುವವರಿಗೆ ಎನ್.ಜಿ.ಟಿ. ಆದೇಶದಿಂದ ತುಂಬ ತೊಂದರೆಯಾಗಿ ರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಅವರ ಹಿತವನ್ನು ಕಾಯಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಳ್ಳಲಿದೆ?